## ಕವಿತೆ



ಅಂಬಾ ಎಂದರಚುತಾ ಗುಟರಾಕಿತು ಬಸವ ನಂದಿ
ಗಂಗೆಯನ್ನು ಕುಮ್ಮುವೆನು ಹೆದರಬೇಡಿ ಕೊಂಬಿಂದ ||
ಕೆಳಗೆ ಬಂದು ನಿನ್ನ ನಾನು ಸಿಂಬೆಯಂತೆ ಸುತ್ತಿಕೊಂಡು
ಅಯ್ಯ ನಾನೇ ಎನ್ನುತಲಿ ಗಂಗೆಯನು ಕಟಿಯುವೆ ||

ಪುಟ್ಟ ಗಂಗೆ ನನ ಕಣ್ಣಿಗೆ ಹಾವಾಗಿ ಕಾಣುವಂಗೆ
ಮೂಗಿನಿಂದ ತಿವಿಯಲೇನು ನಾನು ಮಾಯಾರಂಗ ||
ಗಂಗೆಯುಡುಗೆಯನ್ನು ನಾ ಚಿಂದಿ ಚೂರು ಮಾಡುವೆ
ಕಚ್ಚಿ ತುಂಡು ಮಾಡದಿರೆ ಮೂಷಿಕನೆಸರ ತೊರೆವೆ ||

ಆ ಮಾತನು ಕೇಳಿ ಗಂಗೆ ಅಧೀರಳಾಗಿ ಬೆದರಿದಂಗೆ
ಶಿವನ ಸಂಸಾರದೊಳಗೆ ತಾನು ಅನ್ಯಳಾದಂಗೆ ||
ಏನಯ್ಯ ಚಂದಮಾಮ ಎಂಥ ಯೋಗ ನಿಂದು
ಜಟಾಜೂಟದಲ್ಲೂ ನಿನಗುಂಟು ಪಾಲೊಂದು ||

ನಾಗರಾಜ ನೀನೆಂಥ ಬಲೇಬಲೆ ಭಾಗ್ಯವಂತ
ಆಭರಣವಾಗಿಹೆ ನೀನು ಮಣಿಮಾಲೆಯಂತೆ ||
ನಂದಿ ನಿನ್ನ ಪೂರ್ವಜನ್ಮ ಗಳಿಕೆ ಪುಣ್ಯಫಲವಿದು
ಅನಿವರತ ಆಗಿಹೆ ನೀ ಪರ ಶಿವನ ವಾಹನ ||

ಗಿರಿಜೆ ನೀನು ತಪ ಮಾಡಿ ಪಡೆದುಕೊಂಡ ವರವಿದು
ತನುವಿನಲ್ಲಿ ತನುವಾಗಿ ಶಿವನ ದೇಹದರ್ಧ ಪಾಲು ||
ಶಿವನ ಬಳಗ ನಿಂತಿತೀಗೆ ಕತ್ತಿಯನ್ನು ಮಸೆಯಲು
ಎರಚಲಿಗೆ ನೆಂದಂಗೆ ಗಂಗೆ ಜೀವ ಜಾರಿಲು ||

ಜಾರುತಿರುವ ಗಂಗೆ ಕೈಯ ಹರನಿಡಿದುಕೊಳ್ಳಲು
ಪಾಣಿಗ್ರಹಣವಾದ ಹಾಗೆ ಜಗ ಸಂತಸಗೊಳ್ಳಲು ||
ತಲೆಗೆ ಎಣ್ಣೆ ತಟ್ಟಿಕೊಂಡು ನೀವಿಸಿಕೊಂಡಂಗೆ ಗಂಗೆ
ಕಡಲೆಯಿಟ್ಟು ಪೂಸಿಕೊಂಡು ಮೈಯನುಜ್ಜಿಕೊಳ್ಳುವಂಗೆ ||

ಕೆನ್ನೆ ಮೇಲೆ ಸುಳಿ ಮೂಡಿ ಮುದುಗೊಂಡಳು ಗಂಗಾ
ಜರತಾರಿ ಸೀರೆಯುಟ್ಟು ಮಿಂಚುಗಳೇ ಹೊಳೆದಂಗ ||
ಕೃಷ್ಣವೇಣಿ ನೀಳಜಡೆ ನದಿ ಗಂಗೆಗೆ ಸರಿ ಒಪ್ಪುವಂಗೆ
ಹೆಣ್ತನವೇ ಗೋದಾವರಿ ದಡಗಳನು ಮೀರುವಂಗೆ ||